**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂ:ಟಿಟಿಇ 10 ಇಎಪಿ 2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:10/11/2017.

## ಸುತ್ತೋಲೆ

ವಿಷಯ: ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನತೆ, ಬುದ್ಧಿಮಾಂಧ್ಯ, ದೈಹಿಕ ಅಂಗ ವೈಫಲ್ಯವುಳ್ಳವರು ಹಾಗೂ ಭಾಗಶ: ಮತ್ತು ಪೂರ್ಣ ದೃಷ್ಟಿದೋಷವುಳ್ಳ ಡಿಪ್ಲೊಮಾ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಮೇಲೆ ಗ್ರೀನ್ ಸ್ಟಿಕ್ಕರ್ ಅಂಟಿಸುವ ಕುರಿತು.
ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 15 ಯುಎನ್‌ಇ 2004 ದಿನಾಂಕ:05/03/2004 ಹಾಗೂ ದಿನಾಂಕ:22.03.2004

*****

ಮೇಲ್ಕಂಡ ವಿಷಯದ ಬಗ್ಗೆ ಚರ್ಚಿಸಲು ದಿನಾಂಕ:07/09/2017 ರಂದು ಬೆಳಗ್ಗೆ 12.30 ಗಂಟೆಗೆ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ಪರೀಕ್ಷಾ ಮಂಡಳಿಯ ಅಧಿಕಾರಿ/ಸಿಬ್ಬಂದಿಯವರ ಸಭೆ ಕರೆಯಲಾಗಿತ್ತು. ಮೇಲೆ ತಿಳಿಸಿದ ಉಲ್ಲೇಖದನ್ವಯ ಈ ಕುರಿತು ಚರ್ಚಿಸಲಾಗಿ ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನತೆ, ಬುದ್ಧಿಮಾಂಧ್ಯ, ದೈಹಿಕ ಅಂಗ ವೈಫಲ್ಯವುಳ್ಳವರು ಹಾಗೂ ಭಾಗಶ: ಮತ್ತು ಪೂರ್ಣ ದೃಷ್ಟಿದೋಷವುಳ್ಳ ಡಿಪ್ಲೊಮಾ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಭಾಷಾ ಸಮಸ್ಯೆ ಇರುವುದರಿಂದ ಬರೆಯುವಲ್ಲಿ ವ್ಯಾಕರಣ, ವಾಕ್ಯ ರಚನಾ ದೋಷಗಳು ಆಗುವ ಸಂಭವ ಇರುವುದನ್ನು ಪರಿಗಣಿಸಿ, ಉತ್ತರ ಪತ್ರಿಕೆಯ ಮೌಲ್ಯಮಾಪಕರು ಅಂಥ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಗುರ್ತಿಸಿ, ತಾಳ್ಮೆಯಿಂದ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ಮೇಲೆ ತಿಳಿಸಿದ ನ್ಯೂನತೆಯುಳ್ಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೇಲೆ ಉಲ್ಲೇಖದಲ್ಲಿ ಕಾಣಿಸಿದ ಸರ್ಕಾರದ ಸುತ್ತೋಲೆಯನ್ವಯ ಗ್ರೀನ್ ಸ್ಟಿಕ್ಕರ್ ಅಂಟಿಸಲು ತೀರ್ಮಾನಿಸಲಾಯಿತು.

ಆದುದರಿಂದ ಪ್ರತಿ ಡಿಪ್ಲೊಮಾ ಥಿಯರಿ ಪರೀಕ್ಷೆಗಳಲ್ಲಿ ಮೇಲೆ ತಿಳಿಸಿದ ನ್ಯೂನತೆಯುಳ್ಳ ವಿದ್ಯಾರ್ಥಿಗಳು ಹೆಚ್ಚಿನ ಕಾಲಾವಧಿ ಮತ್ತು ಬದಲಿ ಬರಹಗಾರರನ್ನು ನೇಮಿಸಿಕೊಳ್ಳುವ ಬಗ್ಗೆ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ. ಕಾರಣ ಇಂತಹ ನ್ಯೂನತೆಯುಳ್ಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೇಲೆ **ಗ್ರೀನ್ ಸ್ಟಿಕ್ಕರ್ ಅಂಟಿಸಿ, ಉಳಿದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಜೊತೆಯಲ್ಲಿ ಬಂಡಲಿನಲ್ಲಿ(Booklet Cover) ಇರಿಸಿ,** ತಾಂತ್ರಿಕ ಪರೀಕ್ಷಾ ಮಂಡಳಿಗೆ ಕಳುಹಿಸಲು ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು/ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ ಸೂಚಿಸಲಾಗಿದೆ. ಸದರಿ ಮಾಹಿತಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಸಂಬಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

ಕಾರ್ಯದರ್ಶಿ.

ಇವರಿಗೆ,

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಉಪ ನಿರ್ದೇಶಕರು, ತಾಂತ್ರಿಕ ಪರೀಕ್ಷಾ ಮಂಡಳಿ.
2. ಸಹಾಯಕ ನಿರ್ದೇಶಕರು, ತಾಂತ್ರಿಕ ಪರೀಕ್ಷಾ ಮಂಡಳಿ.
3. ಕುಲಸಚಿವರು, ತಾಂತ್ರಿಕ ಪರೀಕ್ಷಾ ಮಂಡಳಿ.
4. ನಿರ್ದೇಶಕರ ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
5. ಕಾರ್ಯದರ್ಶಿಯವರ ಆಪ್ತಶಾಖೆ. ತಾಂತ್ರಿಕ ಪರೀಕ್ಷಾ ಮಂಡಳಿ.
6. ಕಂಪ್ಯೂಟರ್ ವಿಭಾಗ – ಟಿಟಿಇ ಲಿಂಕ್ಸ್ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.
7. ಇ-ಗವರ್ನೆನ್ಸ್ ವಿಭಾಗ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ಇಸಿಎಸ್ (1), (2) & (3) ವಿಭಾಗಕ್ಕೆ.
9. ಇಆರ್‌ಎಸ್ (3) ವಿಭಾಗಕ್ಕೆ ಮಾಹಿತಿಗಾಗಿ.